# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 792

ಸದಸ್ಯರ ಹೆಸರು : ಶ್ರೀ ಭೀಮರಾವ್ ಬಸವರಾಜ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 12.12.2023

ಉತ್ತರಿಸುವ ಸಚಿವರು : ಸಹಕಾರ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಸಹಕಾರ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ನಿಗಮಗಳು ಮತ್ತು ಯೋಜನೆಗಳು ಯಾವುವು; (ಮಾಹಿತಿ ಒದಗಿಸುವುದು) | ಸಹಕಾರ ಇಲಾಖೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ರಾಜ್ಯ ಉಗ್ರಾಣ ನಿಗಮವು ಒಂದು ಸ್ವಾಯತ್ತ ಸಂಸ್ಥೆಯಾಗಿರುತ್ತದೆ. ಇಲಾಖೆಯ ವ್ಯಾಪ್ತಿಗೊಳಪಡುವ 04 ಅಧೀನ ಇಲಾಖೆಗಳ ಪೈಕಿ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯಲ್ಲಿ ಯಾವುದೇ ಯೋಜನೆಗಳು ಇರುವುದಿಲ್ಲ. ಉಳಿದ ಇಲಾಖೆಗಳಿಗೆ ಸಂಬಂಧಿಸಿದ ಯೋಜನೆಗಳ ವಿವರಗಳು ಈ ಕೆಳಕಂಡಂತಿದೆ.<br><br>1.ಸಹಕಾರ ಸಂಘಗಳ ನಿಬಂಧಕರು ಹಾಗೂ ಕೃಷಿ ಮಾರಾಟ ಇಲಾಖೆಗಳಿಗೆ ಸಂಬಂಧಿಸಿದ ಯೋಜನೆಗಳ ವಿವರಗಳನ್ನು **ಅನುಬಂಧ-1ರಲ್ಲಿ** ನೀಡಲಾಗಿದೆ.<br><br>2.ಕರ್ನಾಟಕ ರಾಜ್ಯ ಉಗ್ರಾಣ ನಿಗಮ: ನಬಾರ್ಡ್ ಸಾಲದ ಆರ್ಥಿಕ ನೆರವಿನೊಂದಿಗೆ WIF & NWS-2015-16 & RIDF XXII ಯೋಜನೆಯಡಿಯಲ್ಲಿ ರಾಜ್ಯಾದ್ಯಂತ ರೈತರು ಬೆಳೆದ ವ್ಯವಸಾಯ ಉತ್ಪನ್ನಗಳಿಗೆ ದಾಸ್ತಾನು ಬೇಡಿಕೆ ಇರುವ 54 ಕೇಂದ್ರಗಳಲ್ಲಿ 9.24 ಲಕ್ಷ ಮೆ.ಟನ್ ಸಾಮರ್ಥ್ಯದ ಉಗ್ರಾಣಗಳು ಹಾಗೂ RIDF XXII ಯೋಜನೆಯಡಿಯಲ್ಲಿ ನಿಗಮದ ಹಾಲಿ ಇರುವ 89 ಉಗ್ರಾಣಗಳಿಗೆ ಮೂಲ ಸೌಕರ್ಯ ಕಾಮಗಾರಿಗಳಾದ ರಸ್ತೆ, ಚರಂಡಿ, ಶೌಚಾಲಯ, ಕಛೇರಿ ಕಟ್ಟಡ ಇತ್ಯಾದಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿರುತ್ತದೆ. |

| | | |
|---|---|---|
| ಆ | ಕಳೆದ 2 ವರ್ಷಗಳಿಂದ ಸಹಕಾರ ಇಲಾಖೆಯಿಂದ ಬೀದರ್ ಜಿಲ್ಲೆಯ ವ್ಯಾಪ್ತಿಯಲ್ಲಿ ಕೈಗೊಂಡ ಯೋಜನೆಗಳು ಯಾವುವು? (ವಿವರ ನೀಡುವುದು) | 1. ಕಳೆದ 2 ವರ್ಷಗಳಲ್ಲಿ ಬೀದರ್ ಜಿಲ್ಲೆಯ ವ್ಯಾಪ್ತಿಯಲ್ಲಿ ಸಹಕಾರ ಸಂಘಗಳ ನಿಬಂಧಕರು ಮತ್ತು ಕೃಷಿ ಮಾರಾಟ ಇಲಾಖೆಗಳಿಗೆ ಸಂಬಂಧಿಸಿದಂತೆ ಕೃಷಿ ಮಾರುಕಟ್ಟೆ ಸಮಿತಿಯಲ್ಲಿ ನಬಾರ್ಡ್ ಯೋಜನೆಯಡಿ ಕೈಗೊಂಡ ಯೋಜನೆಗಳ ವಿವರವನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.<br><br>2.ಕರ್ನಾಟಕ ರಾಜ್ಯ ಉಗ್ರಾಣ ನಿಗಮ: ನಿಗಮವು ಬೀದರ್ ಜಿಲ್ಲಾ ವ್ಯಾಪ್ತಿಯಲ್ಲಿ ವೈಜ್ಞಾನಿಕ ಉಗ್ರಾಣಗಳ ನಿರ್ಮಾಣ ಮತ್ತು ಮೂಲ ಸೌಕರ್ಯ ಕಾಮಗಾರಿಗಳನ್ನು ಅನುಷ್ಠಾನಗೊಳಿಸುತ್ತಿದ್ದು, ಬಾಲ್ಕಿ ಕೇಂದ್ರದಲ್ಲಿ 7228 ಮೆ.ಟನ್ ಸಾಮರ್ಥ್ಯದ ಉಗ್ರಾಣವನ್ನು ಪೂರ್ಣಗೊಳಿಸಲಾಗಿರುತ್ತದೆ. ಔರಾದ್ ಕೇಂದ್ರದಲ್ಲಿ 16680 ಮೆ.ಟನ್ ಸಾಮರ್ಥ್ಯದ 2 ಉಗ್ರಾಣಗಳು ಮತ್ತು ಹುಡಗಿ ಕೇಂದ್ರದಲ್ಲಿ 7228 ಮೆ.ಟನ್ ಸಾಮರ್ಥ್ಯದ 2 ಉಗ್ರಾಣಗಳು ಮೇಲ್ಛಾವಣಿ ಹಂತದಲ್ಲಿ ಪ್ರಗತಿಯಲ್ಲಿದ್ದು, ದಿನಾಂಕ:31.07.2024ರ ಅಂತ್ಯಕ್ಕೆ ಪೂರ್ಣಗೊಳಿಸಲು ಕ್ರಮವಹಿಸಲಾಗುತ್ತಿದೆ. |

ಸಂಖ್ಯೆ:ಸಇ 309 ರರವಿ 2023

**(ಕೆ.ಎನ್.ರಾಜಣ್ಣ)**
ಸಹಕಾರ ಸಚಿವರು

## ಅನುಬಂಧ-1

## ಸಹಕಾರ ಸಂಘಗಳ ನಿಬಂಧಕರು

### ರಾಜ್ಯ ವಲಯ ಯೋಜನೆಗಳು

1. **ಎ) ಬೆಳೆ ಸಾಲಕ್ಕಾಗಿ ಬಡ್ಡಿ ಸಹಾಯಧನ**: ಸಹಕಾರ ಸಾಲ ಸಂಸ್ಥೆಗಳಾದ ಪ್ಯಾಕ್ಸ್ (ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು), ಡಿಸಿಸಿ ಬ್ಯಾಂಕ್‌ಗಳು ಮತ್ತು ಪಿಸಿಆರ್‌ಡಿ ಬ್ಯಾಂಕ್‌ಗಳ ಮೂಲಕ ಶೇ.6 ರ ಬಡ್ಡಿ ದರದಲ್ಲಿ ಕೃಷಿ ಸಾಲವನ್ನು ನೀಡುವ ಯೋಜನೆಯಾಗಿದ್ದು, ಪ್ರಸ್ತುತ ರೂ.3.00 ಲಕ್ಷದವರೆಗಿನ ಅಲ್ಪಾವಧಿಯ ಕೃಷಿ ಸಾಲಕ್ಕೆ ಮತ್ತು ರೂ.2.00 ಲಕ್ಷದವರೆಗೆ ಪಶುಸಂಗೋಪನೆ ಮತ್ತು ಮೀನುಗಾರಿಕೆಗೆ ದುಡಿಯುವ ಬಂಡವಾಳಕ್ಕೆ ಶೇಕಡಾ ಶೂನ್ಯ ಬಡ್ಡಿ ದರಕ್ಕೆ ಇಳಿಸಲಾಗಿದೆ. ಸಾಲದ ನಿಗದಿತ ಕಾಲಮಿತಿ ಹಾಗೂ ತ್ವರಿತ ಮರುಪಾವತಿಯ ಮೇಲೆ ರೈತರಿಗೆ 3% ಬಡ್ಡಿದರದಲ್ಲಿ ರೂ.10.00 ಲಕ್ಷದವರೆಗೆ ಮಧ್ಯಮ ಮತ್ತು ದೀರ್ಘಾವಧಿಯ ಕೃಷಿ ಸಾಲವನ್ನು ನೀಡಲಾಗುತ್ತಿದೆ. ಸಹಕಾರ ಸಂಘಗಳು ವಿತರಿಸಿರುವ ಸಾಲಗಳ ಮೇಲೆ ಬಡ್ಡಿ ಸಹಾಯಧನವನ್ನು ನೀಡಲಾಗುವುದು.

   **ಬಿ) ಸ್ವಸಹಾಯ ವರ್ಗಗಳಿಗೆ ಸಾಲಗಳ ಮೇಲಣ ಬಡ್ಡಿ ಧನಸಹಾಯ:** ಮಹಿಳಾ ಸ್ವಸಹಾಯ ಗುಂಪುಗಳಿಗೆ ಶೂನ್ಯ ಬಡ್ಡಿದರದಲ್ಲಿ ಮತ್ತು ಪುರುಷ ಸ್ವಸಹಾಯ ಗುಂಪುಗಳಿಗೆ ಶೇ. 4 ರ ಬಡ್ಡಿ ದರದಲ್ಲಿ ರೂ.5.00 ಲಕ್ಷದವರೆಗೆ ಸಾಲ ನೀಡಲಾಗುತ್ತಿದೆ. ಆಯವ್ಯಯದಲ್ಲಿ ಅವಕಾಶ ಕಲ್ಪಿಸಿ ಗುಂಪುಗಳ ಪರವಾಗಿ ಸಹಕಾರಿ ಸಂಸ್ಥೆಗಳಿಗೆ ಬಡ್ಡಿ ಸಹಾಯಧನವನ್ನು ಮರುಪಾವತಿಸಲಾಗುತ್ತಿದೆ.

   **ಸಿ) ಅಡಮಾನ ಸಾಲಕ್ಕಾಗಿ ಬಡ್ಡಿ ಸಹಾಯಧನ:** ರಾಜ್ಯದ ಪ್ರಾಥಮಿಕ ಕೃಷಿ ಪತ್ತಿನ ಸಂಘಗಳು ಹಾಗೂ ಟಿ.ಎ.ಪಿ.ಸಿ.ಎಂ.ಎಸ್.ಗಳು, ರೈತರು ಬೆಳೆದ ಕೃಷಿ ಉತ್ಪನ್ನಗಳನ್ನು ಗೋದಾಮುಗಳಲ್ಲಿ ಶೇಖರಣೆ ಮಾಡಿ ಇದರ ಮೇಲೆ ಮಾರುಕಟ್ಟೆ ಬೆಲೆಯ ಶೇ.60ರಷ್ಟು ಅಡಮಾನ ಸಾಲವನ್ನು ಶೇ.11ರ ಬಡ್ಡಿದರದಲ್ಲಿ ವಿತರಿಸುತ್ತಿವೆ. ಸದರಿ ಸಾಲಗಳ ಮೇಲೆ ಗರಿಷ್ಟ ಆರು ತಿಂಗಳ ಅವಧಿಗೆ ಶೇ.4ರ ಬಡ್ಡಿ ಸಹಾಯಧನವನ್ನು ಒದಗಿಸಲಾಗುತ್ತಿದೆ.

2. **ಲ್ಯಾಂಪ್ಸ್ ಸಂಯುಕ್ತ ಸಂಘಗಳಿಗೆ ಮಾರುಕಟ್ಟೆ ಮೂಲ ಸೌಕರ್ಯಗಳ ಸ್ಥಾಪನೆ:** ಲ್ಯಾಂಪ್ಸ್ ಸಹಕಾರ ಸಂಘಗಳಿಗೆ ಮಾರುಕಟ್ಟೆ & ಮೂಲಭೂತ ಸೌಕರ್ಯಗಳನ್ನು ಒದಗಿಸುವುದರಿಂದ ಲ್ಯಾಂಪ್ಸ್ ಸಹಕಾರ ಸಂಘಗಳ ಸದಸ್ಯರು ಸಂಗ್ರಹಿಸಿದ ಕಿರು ಅರಣ್ಯ ಉತ್ಪನ್ನಗಳಿಗೆ ಉತ್ತಮ ಮಾರುಕಟ್ಟೆ ಸೌಲಭ್ಯ ದೊರಕಿ ಅವರು ಆರ್ಥಿಕವಾಗಿ ಲಾಭ ಪಡೆಯುತ್ತಾರೆ.

3. **ವಿವಿಧ ಸಹಕಾರಿ ಸಂಸ್ಥೆಗಳಲ್ಲಿ ಬಿ.ಪಿ.ಎಲ್/ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಹಿಂದುಳಿದ /ಅಲ್ಪಸಂಖ್ಯಾತ, ಮಹಿಳಾ ಮತ್ತು ವಿಕಲಚೇತನ ವರ್ಗದ ಜನರನ್ನು ಸದಸ್ಯರನ್ನಾಗಿ ನೊಂದಾಯಿಸುವ ಯೋಜನೆ:** ವಿವಿಧ ವರ್ಗದವರಾದ ಪ.ಜಾ/ ಪ.ಪಂ/ ಹಿಂದುಳಿದ ವರ್ಗ/ ಅಲ್ಪಸಂಖ್ಯಾತ ವರ್ಗ/ ಮಹಿಳೆಯರು /ವಿಕಲಚೇತನರು / ಬಿಪಿಎಲ್ ದಾರರನ್ನು ವಿವಿಧ ಸಹಕಾರ ಸಂಘಗಳಲ್ಲಿ ಸದಸ್ಯರನ್ನಾಗಿ ನೋಂದಾಯಿಸಲಾಗುವುದು.

**4. ಯಶಸ್ವಿನಿ:** ರಾಜ್ಯದಲ್ಲಿನ ಎಲ್ಲಾ ವರ್ಗದ ಸಹಕಾರ ಸಂಘಗಳ (ಗ್ರಾಮೀಣ ಮತ್ತು ನಗರ) ಸದಸ್ಯರು, ಸ್ವ-ಸಹಾಯ ಗುಂಪುಗಳ ಸದಸ್ಯರು, ನಿಗದಿತ ವಾರ್ಷಿಕ ವಂತಿಗೆ ಪಾವತಿಸಿ ವಯೋಮಿತಿ ನಿರ್ಬಂಧವಿಲ್ಲದೇ ಯಶಸ್ವಿನಿ ಯೋಜನೆಯ ಪ್ರಯೋಜನ ಪಡೆಯಬಹುದಾಗಿರುತ್ತದೆ.

**5. ಕೇಂದ್ರ ಪುರಸ್ಕೃತ ಯೋಜನೆ- ಪ್ಯಾಕ್ಸ್ ಗಳ ಗಣಕೀಕರಣ :** ರೈತರಿಗೆ ಮತ್ತು ಗ್ರಾಮೀಣ ಭಾಗದ ಗ್ರಾಹಕರಿಗೆ ಉತ್ತಮ ಸೇವೆಯನ್ನು ನೀಡಲು ಉದ್ದೇಶಿಸಲಾಗಿದ್ದು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಗಣಕೀಕರಣಗೊಳಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ.

## <u>ಜಿಲ್ಲಾ ಪಂಚಾಯತ್ ಯೋಜನೆಗಳು</u>

**6. ವಿವಿಧ ವರ್ಗದ ಸಹಕಾರಿ ಸಂಸ್ಥೆಗಳಿಗೆ ಸಹಾಯಧನ/ಎನ್.ಸಿ.ಡಿ.ಸಿ. ಯೋಜನೆ (ಸಹಾಯಧನ):** ಈ ಯೋಜನೆಯಡಿ ವಿವಿಧ ವರ್ಗದ ಸಹಕಾರ ಸಂಘಗಳಿಗೆ ಸಹಾಯಧನದ ರೂಪದಲ್ಲಿ ಆರ್ಥಿಕ ನೆರವನ್ನು ನೀಡಲಾಗುತ್ತದೆ.

**7. ವಿವಿಧ ವರ್ಗದ ಸಹಕಾರ ಸಂಘಗಳಿಗೆ ಷೇರು ಬಂಡವಾಳದ ಸಹಾಯ (ಸಾಮಾನ್ಯ/ನಬಾರ್ಡ್/ಎನ್‌ಸಿಡಿ):** ಈ ಯೋಜನೆಯಡಿ ವಿವಿಧ ವರ್ಗದ ಸಹಕಾರಿ ಸಂಸ್ಥೆಗಳಿಗೆ ಷೇರು ಬಂಡವಾಳಕ್ಕಾಗಿ ಆರ್ಥಿಕ ನೆರವನ್ನು ನೀಡಲಾಗುತ್ತದೆ.

**8. ಇತರೆ ಸಹಕಾರ ಸಂಘಗಳ ಷೇರು ಬಂಡವಾಳ:** ಈ ಯೋಜನೆಯಡಿ ಸಾಕಷ್ಟು ಷೇರು ಬಂಡವಾಳ ಹೊಂದಿರದ ಸಂಘಗಳಿಗೆ ಷೇರು ಬಂಡವಾಳ ಒದಗಿಸಿ, ಆ ಮೂಲಕ ಆ ಸಂಘಗಳ ಸಾಲ ಪಡೆಯುವ ಸಾಮರ್ಥ್ಯ ಹೆಚ್ಚಿಸಿ ಆರ್ಥಿಕ ಅಭಿವೃದ್ಧಿಗೆ ಸಹಾಯವಾಗುತ್ತದೆ.

## <u>ತಾಲ್ಲೂಕು ಪಂಚಾಯತ್ ಯೋಜನೆಗಳು</u>

**9.ವಿಶೇಷ ಘಟಕ ಯೋಜನೆಯಡಿ – ಆಸ್ತಿಗಳ ಸೃಷ್ಟಿಗಾಗಿ ಪಿಕಾರ್ಡ್ ಬ್ಯಾಂಕುಗಳು ಮಂಜೂರು ಮಾಡಿದ ಸಾಲಗಳ ಮೇಲೆ ಶೇಕಡ 60 ರಷ್ಟು ಸಹಾಯಧನ:** ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳು ಆಸ್ತಿ ನಿರ್ಮಾಣಕ್ಕಾಗಿ ಪರಿಶಿಷ್ಟ ಜಾತಿ ಸದಸ್ಯರಿಗೆ ಮಂಜೂರು ಮಾಡಿದ ದೀರ್ಘಾವಧಿ ಸಾಲದ ಮೇಲೆ ಶೇಕಡ 60 ರಷ್ಟನ್ನು ಸಹಾಯಧನದ ರೂಪದಲ್ಲಿ ಸಂಬಂಧಪಟ್ಟ ಪಾಥಮಿಕ ಕೃಷಿ ಮತ್ತು ಭೂ ಅಭಿವೃದ್ಧಿ ಬ್ಯಾಂಕ್ ನಿಂದ ಸಾಲ ತೆಗೆದುಕೊಳ್ಳುವವನ ಲೆಕ್ಕಕ್ಕೆ ಹೊಂದಾಣಿಕೆ ಆಗುವಂತೆ ಮಂಜೂರು ಮಾಡಿ ಆದೇಶ ಹೊರಡಿಸುತ್ತದೆ. ಈ ಯೋಜನೆಯಡಿ ಪರಿಶಿಷ್ಟ ಜಾತಿ ಫಲಾನುಭವಿಗಳು, ಬಡತನ ರೇಖೆಯಿಂದ ಮೇಲೆ ಬರಲು ಸಹಕಾರಿಯಾಗುತ್ತದೆ.

**10. ಮಹಿಳಾ ಸಹಕಾರ ಸಂಘಗಳಲ್ಲಿ ಹೂಡಿಕೆಗಳು (ಷೇರು):** ಮಹಿಳೆಯರಿಂದ ಸ್ಥಾಪಿಸಲ್ಪಟ್ಟು ನಡೆಸುತ್ತಿರುವ ಸಹಕಾರ ಸಂಘಗಳು ಸರಿಯಾದ ಸ್ಥಿತಿಯಲ್ಲಿ ಕಾರ್ಯನಿರ್ವಹಿಸಲು ಹಾಗೂ ಈ ಸಂಸ್ಥೆಗಳು ಒಂದು ಸಾಮರ್ಥ್ಯ ಘಟಕವಾಗಲು ಆರಂಭದ ವರ್ಷಗಳಲ್ಲಿ ತಮ್ಮ ಸಿಬ್ಬಂದಿ ವೆಚ್ಚಗಳನ್ನು ಭರಿಸಲು ಈ ಸಂಘಗಳಿಗೆ ಉತ್ತೇಜನ ನೀಡುವ ಸಲುವಾಗಿ ಷೇರು ಸಹಾಯಧನವನ್ನು ನೀಡಲಾಗುತ್ತಿದೆ.

## ಕೃಷಿ ಮಾರಾಟ ಇಲಾಖೆ

### 1. ಕನಿಷ್ಠ ಬೆಂಬಲ ಬೆಲೆ ಯೋಜನೆ:

ರಾಜ್ಯದಲ್ಲಿ ಕೃಷಿ ಕ್ಷೇತ್ರವನ್ನು ಸಮರ್ಥನೀಯವಾಗಿ ಬಲಪಡಿಸುವ ಹಾಗೂ ಕೃಷಿ ಕ್ಷೇತ್ರದಲ್ಲಿ ಸ್ಥಿರತೆಯನ್ನು ಕಾಪಾಡುವ ದೃಷ್ಟಿಯಿಂದ ಮತ್ತು ರಾಜ್ಯದ ರೈತರು ಬೆಲೆ ಕುಸಿತಗೊಂಡ ಸಂದರ್ಭಗಳಲ್ಲಿ ಹತಾಶರಾಗಿ ತಮ್ಮ ಕೃಷಿ/ ತೋಟಗಾರಿಕಾ ಉತ್ಪನ್ನಗಳನ್ನು ಮಾರಾಟ ಮಾಡುವುದನ್ನು ತಪ್ಪಿಸುವ ದೃಷ್ಟಿಯಿಂದ ರೈತರ ಹಿತ ಕಾಪಾಡಲು ಬೆಂಬಲ ಬೆಲೆ ಯೋಜನೆ/ಮಾರುಕಟ್ಟೆ ಮಧ್ಯ ಪ್ರವೇಶ ಯೋಜನೆ/ಫ್ಲೋರ್ಪ್ರೈಸ್ ಯೋಜನೆಗಳನ್ನು ಜಾರಿಗೆ ತರಲಾಗಿದೆ. ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಶಾಸನ 1966ರನ್ವಯ ಸದರಿ ಯೋಜನೆಯು ರಾಜ್ಯದಲ್ಲಿ ಬೆಳೆಯಲಾಗುವ ಎಲ್ಲಾ ಅಧಿಸೂಚಿತ ಕೃಷಿ/ತೋಟಗಾರಿಕಾ ಉತ್ಪನ್ನಗಳಿಗೆ (ಕೇಂದ್ರ ಸರ್ಕಾರವು ಘೋಷಿಸುವ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಘೋಷಿಸುವ ಉತ್ಪನ್ನಗಳನ್ನು ಒಳಗೊಂಡಂತೆ) ಅನ್ವಯಿಸುತ್ತದೆ. ಬೆಂಬಲ ಬೆಲೆ ಯೋಜನೆಯ ಅನುಷ್ಠಾನದಿಂದ ಮಾರುಕಟ್ಟೆಯಲ್ಲಿ ಧಾರಣೆಯು ಸ್ಥಿರತೆ ಹೊಂದಿ ರೈತರಿಗೆ ಉತ್ತಮ ಧಾರಣೆ ದೊರೆತು ರೈತರು ಒತ್ತಡದಿಂದ ಹತಾಶರಾಗಿ ಕಡಿಮೆ ಧಾರಣೆಗೆ ಮಾರಾಟ ಮಾಡುವುದನ್ನು ತಪ್ಪಿಸಲು ಈ ಯೋಜನೆಯು ಸಹಾಯಕವಾಗಿರುತ್ತದೆ.

### 2. ಗ್ರಾಮೀಣ ಮಾರುಕಟ್ಟೆಗಳ ಅಭಿವೃದ್ಧಿ (ನಬಾರ್ಡ್ ಕಾಮಗಾರಿಗಳು):

ಈ ಯೋಜನೆಯನ್ನು ಸಚಿವ ಸಂಪುಟದ ಉಪ ಸಮಿತಿ ಸಭೆಯು ಪ್ರತಿ ವರ್ಷ ರಾಜ್ಯ ಸರ್ಕಾರವು ನಬಾರ್ಡ್‌ನಿಂದ ಅಭಿವೃದ್ಧಿ ಕಾಮಗಾರಿಗಳಿಗೆ ತೆಗೆದುಕೊಳ್ಳುವ ಸಾಲದ ಮೊತ್ತವನ್ನು ವಿವಿಧ ಇಲಾಖೆಗಳಿಗೆ ಹಂಚಿಕೆ ಮಾಡುತ್ತಿದ್ದು, ಅದರಂತೆ ಈ ಯೋಜನೆಯಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. ನಬಾರ್ಡ್ ಸಂಸ್ಥೆಯಿಂದ ಬಿಡುಗಡೆಯಾಗುವ ಮೊತ್ತವು ಸಾಲವಾಗಿದ್ದು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ ಶೇಕಡಾ 95ರಷ್ಟು ಅನುದಾನವಾಗಿರುತ್ತದೆ. ಉಳಿದ ಶೇಕಡಾ 5ರಷ್ಟು ಮೊತ್ತವನ್ನು ಮಾರುಕಟ್ಟೆ ಸಮಿತಿಗಳು ತಮ್ಮ ಮಾರುಕಟ್ಟೆ ನಿಧಿಯಿಂದ ಭರಿಸುತ್ತವೆ.

### 3. ಕಾಯಕ ನಿಧಿ ಯೋಜನೆ:

ರಾಜ್ಯದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಲೈಸನ್ಸ್ ಪಡೆದು ಕಾರ್ಯ ನಿರ್ವಹಿಸುತ್ತಿರುವ ಶ್ರಮಿಕರಿಗೆ ಆರೋಗ್ಯ ಇಲಾಖೆಯ ಆರೋಗ್ಯ ವಿಮಾ ಯೋಜನೆಯಡಿ ಬರದೆ ಇರುವ ಕಾಯಿಲೆಗಳಿಗೆ ಮಾತ್ರ ಗರಿಷ್ಠ ರೂ. 1.00 ಲಕ್ಷದವರೆಗೆ ವೈದ್ಯಕೀಯ ವೆಚ್ಚ ಮರು ಪಾವತಿ ಮಾಡಲಾಗುತ್ತಿದ್ದು, ಹಾಗೂ ಶವಸಂಸ್ಕಾರಕ್ಕೆ ಈ ಹಿಂದೆ ಇದ್ದ ರೂ. 10000-00 ಗಳನ್ನು ದಿನಾಂಕ 19.08.2023 ರಿಂದ ರೂ. 25000-00 ಗಳಿಗೆ ಹೆಚ್ಚಿಗೆ ಮಾಡಿ ನೀಡಲಾಗುತ್ತಿದೆ.

### 4. ರೈತ ಸಂಜೀವಿನಿ ಅಪಘಾತ ವಿಮಾ ಯೋಜನೆ:

ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಯು ರೈತ ಸಂಜೀವಿನಿ ವಿಮಾ ಯೋಜನೆಯನ್ನು ಅನುಷ್ಠಾನಗೊಳಿಸುತ್ತದೆ. ದುಡಿಯುವ ರೈತರ ಕುಟುಂಬದಲ್ಲಿ ಕೃಷಿ ಕಾರ್ಯದಲ್ಲಿ ಅಥವಾ ಕೃಷಿ ಚಟುವಟಿಕೆಯಲ್ಲಿ ತೊಡಗಿರುವಾಗ ಆಕಸ್ಮಿಕ ಸಾವು/ಶಾಶ್ವತ

ಅಂಗವಿಕಲತೆ ಸಂಭವಿಸಿದ ಸಮಯದಲ್ಲಿ ಅಂತಹ ರೈತ ಕುಟುಂಬಕ್ಕೆ ಆರ್ಥಿಕ ಸಹಾಯ ನೀಡುವುದರ ಮೂಲಕ ಸಾಮಾಜಿಕ ಭದ್ರತೆ ಒದಗಿಸುವುದು ಯೋಜನೆಯ ಉದ್ದೇಶವಾಗಿರುತ್ತದೆ. ಈ ಯೋಜನೆಯಡಿ ಸಂಬಂಧಪಟ್ಟ ರೈತರು ಆಕಸ್ಮಿಕವಾಗಿ ಮರಣ ಅಥವಾ ಶಾಶ್ವತ ಅಂಗವಿಕಲತೆ ಹೊಂದಿದಲ್ಲಿ ರೂ.10,000/- ರಿಂದ 1,00,000/- ಗಳವರೆಗೆ ಪರಿಹಾರ ನೀಡಲು ಅವಕಾಶವಿರುತ್ತದೆ.

**5. ಗ್ರೂಪ್ ಟರ್ಮ್ ಇನ್ಸೂರೆನ್ಸ್ ಯೋಜನೆ:**

ರಾಜ್ಯದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಲೈಸನ್ಸ್ ಪಡೆದು ಕಾರ್ಯನಿರ್ವಹಿಸುತ್ತಿರುವ ನೋಂದಾಯಿತ ಶ್ರಮಿಕರಿಗೆ 2021-22ನೇ ಸಾಲಿಗೆ ಎಲ್ಐಸಿ ಸಹಯೋಗದೊಂದಿಗೆ ಈ ಯೋಜನೆ ಜಾರಿಯಲ್ಲಿರುತ್ತದೆ. ಈ ಯೋಜನೆಯಡಿಯಲ್ಲಿ ಮೃತ ಶ್ರಮಿಕರ ವಾರಸುದಾರರಿಗೆ ರೂ.1.00 ಲಕ್ಷ ಪರಿಹಾರ ಧನ ನೀಡಲಾಗುವುದು.

ಅನುಬಂಧ – 2

# ಸಹಕಾರ ಸಂಘಗಳ ನಿಬಂಧಕರು

[ ಕಳೆದ 2 ವರ್ಷಗಳಲ್ಲಿ ಸಹಕಾರ ಇಲಾಖೆಯಿಂದ ಬೀದರ್ ಜಿಲ್ಲೆಯ ವ್ಯಾಪ್ತಿಯಲ್ಲಿ ಕೈಗೊಂಡ ಯೋಜನೆಗಳ ವಿವರ. ]

| | | 2021–22ನೇ ಸಾಲುಗಳು | | | | | | | 2022–23ನೇ ಸಾಲುಗಳು | | | | | | |
|---|---|---|---|---|---|---|---|---|---|---|---|---|---|---|---|
| ಕ್ರಸಂ. | ಯೋಜನೆಗಳು/ಕಾರ್ಯಕ್ರಮ ವಿಷಯವಾರು ವಿವರ | ವಾರ್ಷಿಕ ಗುರಿ | | ಬಿಡುಗಡೆಯಾದ ಅನುದಾನ | 31–03–2022 ರ ಅಂತ್ಯಕ್ಕೆ ಸಾದನೆ | | ಒಟ್ಟು ಶೇಕಡಾ ವಾರು | | ವಾರ್ಷಿಕ ಗುರಿ | | ಬಿಡುಗಡೆಯಾದ ಅನುದಾನ | 31–03–2022 ರ ಅಂತ್ಯಕ್ಕೆ ಸಾದನೆ | | ಒಟ್ಟು ಶೇಕಡಾ ವಾರು | |
| | | ಭೌತಿಕ | ಆರ್ಥಿಕ | | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಭೌತಿಕ | ಆರ್ಥಿಕ | | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 |
| 1 | ರಾಜ್ಯ ಯೋಜನೆಗಳು | | | | | | | | | | | | | | |
| 1 | ಪರಿಶಿಷ್ಟ ಜಾತಿದವರನ್ನು ವಿವಿಧ ಸಹಕಾರ ಸಂಘಗಳಲ್ಲಿ ಸದಸ್ಯರನ್ನಾಗಿ ನೊಂದಾಯಿಸಲು ಆರ್ಥಿಕ ಸಹಾಯಧನ 2425–00–108–0–58–422 | 180 | 0.90 | 1.60 | 1.60 | 320 | 100% | 100% | 90 | 0.90 | 0.90 | 0.90 | 90 | 100% | 100% |
| 2 | ಪರಿಶಿಷ್ಟ ಪಂಗಡದವರನ್ನು ವಿವಿಧ ಸಹಕಾರ ಸಂಘಗಳಲ್ಲಿ ಸದಸ್ಯರನ್ನಾಗಿ ನೊಂದಾಯಿಸಲು ಆರ್ಥಿಕ ಸಹಾಯಧನ 2425–00–108–0–58–423 | 36 | 0.18 | 0.18 | 0.18 | 36 | 100% | 100% | 36 | 0.18 | 0.18 | 0.18 | 36 | 100% | 100% |
| 3 | ಹಿಂದುಳಿದ ವರ್ಗ/ ಅಲ್ಪಾಸಂಖ್ಯಾತರ/ ಅಲೆಮಾರಿ ಜನ ವರ್ಗದವರಿಗೆ ವಿವಿಧ ಸಹಕಾರ ಸಂಘಗಳಲ್ಲಿ ಸದಸ್ಯರನ್ನಾಗಿ ನೊಂದಾಯಿಸಲು ಆರ್ಥಿಕ ಸಹಾಯಧನ 2425–00–108–0–58–106 | 120 | 0.60 | 0.60 | 0.60 | 120 | 100% | 100% | 54 | 0.27 | 0.27 | 0.27 | 54 | 100% | 100% |
| 4 | ಅಲ್ಪಸಂಖ್ಯಾತ ವರ್ಗದ ಸದಸ್ಯರಿಗೆ ನೊಂದಾಯಿಸಲು 2425–00–108–0–58–106 | 180 | 0.90 | 0.685 | 0.685 | 137 | 76% | 76% | 66 | 0.33 | 0.33 | 0.33 | 66 | 100% | 100% |
| 5 | ಮಹಿಳಾ ಜನ ವರ್ಗದವರಿಗೆ ವಿವಿಧ ಸಹಕಾರ ಸಂಘಗಳಲ್ಲಿ ಸದಸ್ಯರನ್ನಾಗಿ ನೊಂದಾಯಿಸಲು ಆರ್ಥಿಕ ಸಹಾಯಧನ 2425–00–108–0–58–106 | 400 | 2.00 | 1.995 | 1.995 | 399 | 99.75% | 99.75% | 132 | 0.66 | 0.66 | 0.66 | 132 | 100% | 100% |

| | | | | | | | | | | | | | | |
|---|---|---|---|---|---|---|---|---|---|---|---|---|---|---|
| 6 | ವಿಕಲಚೇತನರನ್ನು ಸಹಕಾರ ಸಂಘಗಳ ರಚನೆ/ವಿವಿಧ ಸಹಕಾರ ಸಂಘಗಳಲ್ಲಿ ವಿಕಲಚೇತನರನ್ನು ಸದಸ್ಯರನ್ನಾಗಿ ನೊಂದಾಯಿಸಲು ಆರ್ಥಿಕ ಸಹಾಯಧನ 2425–00–108–0–58–106 | 36 | 0.18 | 0 | 0 | 0 | 0% | 0% | 12 | 0.06 | 0.06 | 0.06 | 12 | 100% | 100% |
| 7 | ಬಡತನ ರೇಖೆಗಿಂತ ಕೇಳಗಿರುವ ಬಿ.ಪಿ.ಎಲ್. ಕಾರ್ಡುದಾ ರರಿಗೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಸದಸ್ಯರನ್ನಾಗಿ ನೊಂದಾಯಿಸಲು ಆರ್ಥಿಕ ಸಹಾಯಧನ 2425–00–108–0–58–106 | 262 | 1.31 | 1.29 | 1.29 | 258 | 99% | | 125 | 0.625 | 0.625 | 0.625 | 125 | 100% | 100% |
| 8 | ಪ.ಜಾತಿ/ಪ,ಪವರ್ಗ ಹಿಂದುಳಿದ ವರ್ಗ ಅಲ್ಪಸಂಖ್ಯಾತರ ಸಹಕಾರ ಸಂಘಗಳಿಗೆ ಆರ್ಥಕ ನೇರವು ಯೋಜನೆ. 2425–00–108–0–62–059 | 0.00 | 0.00 | 0% | 0 | 0 | 0% | 0% | 0.00 | 0.00 | 0 | 0 | 0 | 0 | 0 |
| | ಒಟ್ಟು | 1214.00 | 6.07 | 6.35 | 6.35 | 1270.00 | 134% | 134% | 505 | 3.03 | 3.03 | 3.03 | 505 | 100% | 100% |
| | ಶೂನ್ಯ ಬಡ್ಡಿದರದಲ್ಲಿ ರೂ.3.00 ಲಕ್ಷಗಳವರೆಗೆ ಅಲ್ಪಾವಧಿ ಕೃಷಿ ಸಾಲದ ಬಡ್ಡಿ ಸಹಾಯ ಧನ ಯೋಜನೆ 2425–00–107–2–41 | 158718 | 4289.01 | 4289.01 | 4289.01 | 158718 | 100% | 100% | 156312 | 4003.21 | 1740.76 | 1740.76 | 81165 | 43% | 52% |
| | ಶೇಕಡಾ 3.00 ರ ಬಡ್ಡಿದರದಲ್ಲಿ ಮಧ್ಯಮಾವಧಿ ಕೃಷಿ ಸಾಲದ ಬಡ್ಡಿ ಸಹಾಯಧನ ಯೋಜನೆ (ರೂ.10.00 ಲಕ್ಷಗಳವರೆಗೆ) 2425–00–107–2–41 | 6078 | 469.74 | 469.74 | 469.74 | 6078 | 100% | 100% | 6645 | 458.60 | 205.67 | 205.67 | 2373 | 45% | 36% |
| | ಸ್ವಸಹಾಯ ಗುಂಪುಗಳ ಬಡ್ಡಿ ಸಹಾಯಧನ ಯೋಜನೆ 2425–00–107–2–41 | 11208 | 1899.07 | 1899.07 | 1899.07 | 11208 | 100% | 100% | 14990 | 2287.06 | 2287.06 | 2287.06 | 14990 | 100% | 100% |
| | ಒಟ್ಟು | 176004 | 6657.82 | 6657.82 | 6657.82 | 176004 | – | – | 177947 | 6748.87 | 4233.49 | 4233.49 | 98528 | – | – |

| | | | | | | | | | | | | | | | |
|---|---|---|---|---|---|---|---|---|---|---|---|---|---|---|---|
| 1 . | ಜಿಲ್ಲಾ ಪಂಚಾಯತ ಯೋಜನೆಗಳು | | | | | | | | | | | | | | |
| 1 | ವಿವಿಧ ಸಹಕಾರ ಸಂಘಗಳಿಗೆ ಶೇರು ಬಂಡವಾಳ ಸಹಾಯ ನಬಾರ್ಡ (ಎನ್.ಸಿ.ಡಿ.ಸಿ) ಯೋಜನೆ ಲೆಕ್ಕ ಶಿರ್ಷಿಕೆ 4425–00–101–0–26 | 16 | 8.00 | 8.00 | 8.00 | 16 | 100% | 100% | 16 | 8.00 | 8.00 | 8.00 | 16.00 | 100% | 100% |
| 2 | ವಿವಿಧ ಸಹಕಾರ ಸಂಘಗಳಿಗೆ ಸಹಾಯಧನ ಯೋಜನೆ ಲೆಕ್ಕ ಶಿರ್ಷಿಕೆ 2425–00–101–0–28 | 8 | 3.00 | 3.00 | 3.00 | 8 | 100% | 100% | 3 | 3.00 | 3.00 | 3.00 | 8 | 100% | 100% |
| 3 | ಇದರೆ ಸಹಕಾರ ಸಂಘಗಳಿಗೆ ಶೇರು ಬಂಡವಾಳ ಬಲರ್ವದನೆ ಯೋಜನೆ ಲೆಕ್ಕ ಶಿರ್ಷಿಕೆ 4425–00–101–0–29 | 16 | 5.00 | 5.00 | 5.00 | 16 | 100% | 100% | 16 | 5.00 | 5.00 | 5.00 | 16 | 100% | 100% |
| | ಒಟ್ಟು | 40 | 16.00 | 16.00 | 16.00 | 40 | 100% | 100% | 35 | 16.00 | 16.00 | 16.00 | 40 | 100% | 100% |
| 3 | ತಾಲ್ಲೂಕ ಪಂಚಾಯತ ಯೋಜನೆಗಳು | | | | | | | | | | | | | | |
| 1 | ವಿಶೇಷ ಘಟಕ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿಯವರನ್ನು ಪಿಕಾರ್ಡ ಬ್ಯಾಂಕ ಮೂಲಕ ಸಹಾಯಧನ ಲೆಕ್ಕ ಶೀರ್ಷಿಕೆ 2425–00–101–0–61 | 5 | 2.30 | 2.30 | 2.3 | 5 | 100% | 100% | 5 | 2.30 | 2.30 | 2.30 | 5 | 100% | 100% |
| 2 | ಮಹಿಳಾ ಸಹಕಾರ ಸಂಘಗಳಿಗೆ ಹೂಡಿಕೆಗಳು ಲೆಕ್ಕ ಶೀರ್ಷಿಕೆ 2425–00–101–0–62 | 10 | 3.00 | 3.00 | 3.00 | 10 | 100% | 100% | 10 | 3.00 | 3.00 | 3.00 | 10 | 100% | 100% |
| | ಒಟ್ಟು | 15 | 5.30 | 5.30 | 5.30 | 15 | 100% | 100% | 15 | 5.30 | 5.30 | 5.30 | 15 | 100% | 100% |
| 1 | ಯಶಸ್ವಿನಿ | ಮಾರ್ಚ 2023 ರ ಅಂತ್ಯಕ್ಕೆ ಬೀದರ ಜಿಲ್ಲೆಯಲ್ಲಿ ಯಶಸ್ವಿನಿ ಯೋಜನೆಯಡಿಯಲ್ಲಿ ಒಟ್ಟು ನೊಂದಣಿ 1,22,398 (ಕಾರ್ಡುಗಳು 34,788) ಜನರು ಸದಸ್ಯತ್ವ ಮಾಡಿಕೊಂಡಿರುತ್ತಾರೆ. ಜನವರಿ 2023 ರಿಂದ ನವೆಂಬರ್ 2023 ರವರೆಗೆ ಬೀದರ್ ಜಿಲ್ಲೆಯಲ್ಲಿ 1331 ಸದಸ್ಯರು ರೂ.184.18 ಲಕ್ಷದ ಮೊತ್ತದ ಚಿಕಿತ್ಸೆಯನ್ನು ಪಡೆದಿರುತ್ತಾರೆ. | | | | | | | | | | | | | |

# ಕೃಷಿ ಮಾರಾಟ ಇಲಾಖೆ

## ನಬಾರ್ಡ್ ಅನುಮೋದಿತ ಕಾಮಗಾರಿಗಳಿಗೆ 2018-19ನೇ ಸಾಲಿನಿಂದ ಬಿಡುಗಡೆಯಾದ ಅನುದಾನವನ್ನು, ಮಾರುಕಟ್ಟೆ ಸಮಿತಿಗಳಿಗೆ ಮರು ಪಾವತಿಸಿದ ವಿವರ

| Sl No. | NABARD Tranche Code | Year of approval by the NABARD | | Name of the APMC | Name of the Work | Project Cost | NABARD Loan | Tender approved Amount | Actual Expenditure as on Feb-23 | Grant released up to March 2018 | Grant released | | | | | Balance grant to be released | Present Status of the Work |
|---|---|---|---|---|---|---|---|---|---|---|---|---|---|---|---|---|---|
| | | | | | | | | | | | 2018-19 | 2019-20 | 2020-21 | 2021-22 | 2022-23 | | |
| 1 | 2 | 3 | | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 |
| 501 | 2019-20 DAM-168 | 2020-21 | Bidar | Basavakalyana | Development of Fruits and Vegetable Market of APMC Basavakalyan | 483.00 | 458.85 | 410.27 | 410.27 | 0.00 | 0.00 | 0.00 | 0.00 | 300.00 | 89.75 | 0.00 | Completed |
| | | | | | | **483.00** | **458.85** | **410.27** | **410.27** | **0.00** | **0.00** | **0.00** | **0.00** | **300.80** | **89.75** | **0.00** | |